# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 884+888 |
| ಸದಸ್ಯರ ಹೆಸರು | : | 1) ಶ್ರೀ ನಸೀರ್ ಅಹ್ಮದ್<br>2)ಶ್ರೀ ಬಿ.ಎಂ.ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24-02-2022. |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಅಲ್ಪಸಂಖ್ಯಾತರ ಇಲಾಖೆಯಿಂದ ಹೆಲ್ಪ್‌ಲೈನ್ ಕೇಂದ್ರ ಕಾರ್ಯನಿರ್ವಹಿಸುತ್ತಿದೆಯೇ; ಹಾಗಿದ್ದಲ್ಲಿ ಈ ಹೆಲ್ಪ್‌ಲೈನ್ ಕೇಂದ್ರ ಪ್ರಾರಂಭಿಸಲು ಸರ್ಕಾರ ಹಾಗೂ ಆರ್ಥಿಕ ಇಲಾಖೆ ಅನುಮತಿ ನೀಡಿದೆಯೇ; ನೀಡಿದ್ದಲ್ಲಿ ಅವುಗಳ ಆದೇಶ ನೀಡುವುದು. | ಸರ್ಕಾರಿ ಆದೇಶ ಸಂಖ್ಯೆ: ಎಮ್‌ಡಬ್ಲ್ಯೂಡಿ 208 ಎಮ್ ಡಿ ಎಸ್ 2021 ದಿ:26.04.2021 ರ ಆದೇಶದನ್ವಯ ನಿರ್ದೇಶನಾಲಯದ ಕೇಂಧ್ರ ಕಛೇರಿಯಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿ ವ್ಯವಸ್ಥಿತಗೊಳಿಸಲಾಗಿರುತ್ತದೆ.<br>ಇದಕ್ಕೆ ತಗಲುವ ವೆಚ್ಚವನ್ನು ನಿರ್ದೇಶನಾಲಯದ ಆಡಳಿತ ವೆಚ್ಚ ಲೆಕ್ಕಶೀರ್ಷಿಕೆ ಹಾಗೂ ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ ಯೋಜನೆಯ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಲಾಗುತ್ತಿದೆ. ಈ ಅನುದಾನದಲ್ಲಿ ಆಡಳಿತಾತ್ಮಕ ಸಂವಹನ (IEC Activities) ಚಟುವಟಿಕೆಗಳಿಗೆ ನಿರ್ವಹಿಸುತ್ತಿದ್ದು, ಇದಕ್ಕಾಗಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿರುವುದಿಲ್ಲ. |
| ಆ. | ಸದರಿ ಹೆಲ್ಪ್‌ಲೈನ್ ಕೇಂದ್ರವನ್ನು ಯಾವ ಸ್ಥಳದಿಂದ ನಿರ್ವಹಿಸಲಾಗುತ್ತಿದೆ; ಸದರಿ ಹೆಲ್ಪ್‌ಲೈನ್ ಕೇಂದ್ರದ ವಿಳಾಸವನ್ನು ಸಾರ್ವಜನಿಕಗೊಳಿಸಲಾಗಿದೆಯೇ;<br>ಹಾಗಿದ್ದಲ್ಲಿ, ವಿವರ ನೀಡುವುದು; | ಹೆಲ್ಪ್‌ಲೈನ್ ಕೇಂದ್ರವನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿಯಾದ ಮೌಲಾನ ಆಜಾದ ಭವನ, ವಸಂತನಗರ ದಲ್ಲಿ ನಿರ್ವಹಿಸಲಾಗುತ್ತಿದೆ.<br>ಅಲ್ಪಸಂಖ್ಯಾತರ ಸಮುದಾಯದ ಕಲ್ಯಾಣಕ್ಕಾಗಿ ಇಲಾಖೆಯಿಂದ ಹಲವಾರು ಯೋಜನೆಗಳು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗಳ ಕುರಿತು ಸಮುದಾಯಕ್ಕೆ ಸಮರ್ಪಕವಾಗಿ ಮಾಹಿತಿ ತಲುಪಿಸಲು ದೂರವಾಣಿ, ಟ್ವೀಟರ್, ಫೇಸ್‌ಬುಕ್, ವಾಟ್ಸಪ್, ಗಳಂತಹ ಸಮೂಹ ಮಾಧ್ಯಮಗಳ ಮೂಲಕ ಜನರಿಗೆ ಇಲಾಖೆಯ ಯೋಜನೆಗಳ ಮಾಹಿತಿ/ಅರಿವು ಮೂಡಿಸುವುದು ಹಾಗೂ ಕುಂದುಕೊರತೆಗಳನ್ನು ಸ್ವೀಕರಿಸಲು ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ. |

| | | |
|---|---|---|
| ಇ. | ಸದರಿ ಹೆಲ್ಪ್‌ಲೈನ್ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮಂಜೂರಾಗಿರುವ ಖಾಯಂ ಹುದ್ದೆಯಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಯೇ; ಹಾಗಿದ್ದಲ್ಲಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ನೀಡುವುದು; | ಹೆಲ್ಪ್‌ಲೈನ್ ಕೇಂದ್ರವನ್ನು ನಿರ್ವಹಣೆ ಮಾಡಲು ಇ-ಟೆಂಡರ್‌ನ್ನು ಆಹ್ವಾನಿಸಿ ನಿಯಮಾನುಸಾರ ಕಾರ್ಯದೇಶ ನೀಡಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆದು ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಹಾಗೂ<br><br>ಅಲ್ಪಸಂಖ್ಯಾತರ ನಿರ್ದೇಶನಾಲಯದ ಆದೇಶ ಸಂಖ್ಯೆ: ಅಸಂನಿ/ ಸಹಾಯವಾಣಿ.ತ/ ಸಿಆರ್-185/2021-22 ರನ್ವಯ ಹೊಸದಾಗಿ ನೇಮಕಗೊಂಡ ಜಿಲ್ಲಾ ಅಧಿಕಾರಿಗಳನ್ನು ಹೆಲ್ಪ್‌ಲೈನ್ ಕೇಂದ್ರದ ಶಿಫ್ಟ್ ಅಧಿಕಾರಿಗಳಾಗಿ ನೇಮಿಸಿ, ಪ್ರತಿ ತಿಂಗಳು ಒಬ್ಬರಂತೆ ಆಡಳಿತಾತ್ಮಕ ಸಂವಹನ (IEC Activities) ಚಟುವಟಿಕೆಗಳನ್ನು ನಿರ್ವಹಿಸುವ ಬಗ್ಗೆ ತರಬೇತಿ ನೀಡುವುದರೊಂದಿಗೆ ಹೆಲ್ಪ್‌ಲೈನ್ ದೈನಂದಿನ ಕಾರ್ಯಚರಣೆಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ. | ಸದರಿ ಹೆಲ್ಪ್‌ಲೈನ್ ಕೇಂದ್ರವನ್ನು ಹೊರಗುತ್ತಿಗೆ ಏಜೆನ್ಸಿ ಮೂಲಕ ನಡೆಸಲಾಗುತ್ತಿದ್ದಲ್ಲಿ, ಸದರಿ ಹೊರಗುತ್ತಿಗೆ ಏಜೆನ್ಸಿಯನ್ನು ಯಾವ ಆಧಾರದಲ್ಲಿ ಆಯ್ಕೆ ಮಾಡಲಾಗಿದೆ? (ಆಯ್ಕೆ ಪ್ರಕ್ರಿಯೆಯ ಪೂರ್ಣ ಮಾಹಿತಿ ಒದಗಿಸುವುದು) | ಹೆಲ್ಪ್‌ಲೈನ್ ಕೇಂದ್ರವನ್ನು ನಿರ್ವಹಣೆ ಮಾಡಲು ಇ-ಟೆಂಡರ್‌ನ್ನು ಆಹ್ವಾನಿಸಿ ನಿಯಮಾನುಸಾರ ಕಾರ್ಯದೇಶ ನೀಡಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆದು ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. |
| ಉ. | ಸದರಿ ಹೆಲ್ಪ್‌ಲೈನ್ ಕೇಂದ್ರಲ್ಲಿ ನಡೆಯುತ್ತಿರುವ ದಿನ ನಿತ್ಯದ ಚಟುವಟಿಕೆ ನಿರ್ವಹಣೆ ಮಾಡಲು ಯಾರಾದರೂ ಸರ್ಕಾರದ ಖಾಯಂ ಸಿಬ್ಬಂದಿ ಇದ್ದಾರೆಯೇ; ಹಾಗಿದ್ದಲ್ಲಿ ವಿವರ ನೀಡುವುದು? | ಅಲ್ಪಸಂಖ್ಯಾತರ ನಿರ್ದೇಶನಾಲಯದ ಆದೇಶ ಸಂಖ್ಯೆ: ಅಸಂನಿ/ ಸಹಾಯವಾಣಿ.ತ/ ಸಿಆರ್-185/2021-22 ರನ್ವಯ ಹೊಸದಾಗಿ ನೇಮಕಗೊಂಡ ಜಿಲ್ಲಾ ಅಧಿಕಾರಿಗಳನ್ನು ಹೆಲ್ಪ್‌ಲೈನ್ ಕೇಂದ್ರದ ಶಿಫ್ಟ್ ಅಧಿಕಾರಿಗಳಾಗಿ ನೇಮಿಸಿ, ಪ್ರತಿ ತಿಂಗಳು ಒಬ್ಬರಂತೆ ಆಡಳಿತಾತ್ಮಕ ಸಂವಹನ (IEC Activities) ಚಟುವಟಿಕೆಗಳನ್ನು ನಿರ್ವಹಿಸುವ ಬಗ್ಗೆ ತರಬೇತಿ ನೀಡುವುದರೊಂದಿಗೆ ಹೆಲ್ಪ್‌ಲೈನ್ ದೈನಂದಿನ ಕಾರ್ಯಚರಣೆಗಳನ್ನು ಕೈಗೊಳ್ಳಲಾಗುತ್ತಿದೆ. |
| ಊ. | ಸದರಿ ಹೆಲ್ಪ್‌ಲೈನ್ ಕೇಂದ್ರದಿಂದ ಸರ್ಕಾರಕ್ಕೆ ಆಗುತ್ತಿರುವ ವೆಚ್ಚವೆಷ್ಟು;<br>ಇದ್ದರಿಂದ ಅಲ್ಪಸಂಖ್ಯಾತರ ಸಮುದಾಯಕ್ಕೆ ಉಪಯೋಗವಾಗುತ್ತಿದೆಯೇ: ಹಾಗಿದ್ದಲ್ಲಿ ಯಾವ ರೀತಿ ಉಪಯೋಗವಾಗುತ್ತಿದೆ? (ಮಾಹಿತಿ ಒದಗಿಸುವುದು) | ಹೆಲ್ಪ್‌ಲೈನ್ ಕೇಂದ್ರಕ್ಕೆ ಮಾಹೆಯಾನ ಅಂದಾಜು ರೂ.10.00ಲಕ್ಷ ವೆಚ್ಚವಾಗುತ್ತಿದ್ದು, ಇದರಡಿ ಹೊರಗುತ್ತಿಗೆ ವೇತನ, ನಿರ್ವಹಣೆ ವೆಚ್ಚ, ಕಂಪ್ಯೂಟರ್‌ಗಳ, ಪಿಠೋಪಕರಣಗಳ ಹಾಗೂ ತಂತ್ರಾಂಶ ವೆಚ್ಚವನ್ನು ಒಳಗೊಂಡಿರುತ್ತದೆ.<br><br>ಇದರಿಂದ ಅಲ್ಪಸಂಖ್ಯಾತರ ಸಮುದಾಯಕ್ಕೆ ಇಲಾಖೆಯಿಂದ ಹಲವಾರು ಯೋಜನೆಗಳು ಅನುಷ್ಠಾನಗೊಳಿಸುತ್ತಿದ್ದರೂ, ಸಹ ಯೋಜನೆಗಳ ಬಗ್ಗೆ ಸಮುದಾಯಕ್ಕೆ ಸಮರ್ಪಕವಾಗಿ ಮಾಹಿತಿ ತಲುಪಿಸಲು ಹಾಗೂ ಕುಂದುಕೊರತೆಗಳನ್ನು ಸ್ವೀಕರಿಸಲು ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ. ಈ ಕೇಂದ್ರಕ್ಕೆ ವಿಶೇಷವಾಗಿ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ: |

| | | |
|---|---|---|
| | | 8277799990 ಮೂಖಾಂತರ ಸಾರ್ವಜನಿಕರು ದೂರವಾಣಿ ಹಾಗೂ ಇತರೆ ಸಮೂಹ ಮಾದ್ಯಮಗಳಾದ ಟ್ವಿಟರ್, ವಾಟ್ಸಪ್ ಮೂಲಕ ಸಂಪರ್ಕಿಸಿ ಇಲಾಖೆಯ ಮಾಹಿತಿ ಸಾರ್ವಜನಿಕರಿಗೆ ತಲುಪಿಸಲು ಹಾಗೂ ಕಂದುಕೊರತೆಗಳನ್ನು ಬಗೆಹರಿಸಲು ಕ್ರಮವಹಿಸಲಾಗಿರುತ್ತದೆ. ಮುಂದುವರೆದು ಈ ಕೇಂದ್ರವನ್ನು ಸ್ಥಾಪನೆ ಮಾಡಿದ ನಂತರ ಇದುವರೆಗೂ ಸುಮಾರು **29,356** ಕರೆ/ಅಹವಾಲುಗಳನ್ನು ಸ್ವೀಕರಿಸಿ **29170** ಆಹವಾಲು/ಕರೆಗಳಿಗೆ ಪರಿಹಾರ ಒದಗಿಸಲಾಗಿರುತ್ತದೆ. ಈ ಕೇಂದ್ರದ ಕುರಿತು ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಸಾರ್ವಜನಿಕ ಸ್ಥಳಗಳಲ್ಲಿ, ಅಲ್ಪಸಂಖ್ಯಾತರ ಧಾರ್ಮಿಕ ಸ್ಥಳಗಳಲ್ಲಿ ಸಹಾಯವಾಣಿ ಕೇಂದ್ರದ ಕುರಿತು ಅರಿವು ಮೂಡಿಸಲು ಕ್ರಮ ವಹಿಸಲಾಗಿದೆ.<br><br>ಹೆಲ್ಪ್‌ಲೈನ್ ಕೇಂದ್ರದ ಮುಖಾಂತರ ಇಲಾಖೆಯ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ನಡೆಯುತ್ತದೆ. ಹಾಗೂ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಪರಿಹಾರ ಒದಗಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: MWD 70 LMQ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ